ಸಾಕ್ಷಿಯನ್ನು ದಿಃ 20.09.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ವಿ ಎಮ್ ಹೆಚ್ ವಕೀಲರಿಂದಃ**

ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ನಿಪಿ-1 ನೊಂದಾಯಿತ ಕಬ್ಜಾ ರಹಿತ ಕರಾರು ಪತ್ರ

ನಿಪಿ-2 ಸರ್ವೆ ನಂ. 31/2+3 ರ ಪಹಣಿ

ನಿಪಿ-3 ನೋಟಿಸಿನ ಪ್ರತಿ

ನಿಪಿ-4,5 2 ಅಂಚೆ ರಶೀದಿಗಳು

ನಿಪಿ-6,7 2 ಅಂಚೆ ಸ್ವೀಕೃತ ಪತ್ರಗಳು

ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿಃ 20.09.2022

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.